8-1-2020

# ವಿದ್ಯುತ್ ಸಮಸ್ಯೆ ಸಂವಾದ ಇಂದು

ಕಲಬುರಗಿ: ನಗರದ ಬೇಲೂರ ಕ್ರಾಸ್ ಬಳಿ 2ನೇ ಹಂತದಲ್ಲಿನ ಕಪಲೇಶ್ವರ ದಾಲ್‌ಮಿಲ್‌ನಲ್ಲಿ 9ರಂದು ಸಂಜೆ 4ಕ್ಕೆ ವಿದ್ಯುತ್ ಸಮಸ್ಯೆಗೆ ಸಂಬಂಧಿಸಿದಂತೆ ಸಂವಾದ ಸಭೆ ಆಯೋಜಿಸಲಾಗಿದೆ ಎಂದು ಹೈಕ ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಅಮರನಾಥ ಸಿ ಪಾಟೀಲ್, ಕಾರ್ಯದರ್ಶಿ ಶಶಿಕಾಂತ ಪಾಟೀಲ್ ತಿಳಿಸಿದ್ದಾರೆ. ಹೈ.ಕ.ವಾಣಿಜ್ಯೋದ್ಯಮ ಸಂಸ್ಥೆ, ದಾಲ್ ಮಿಲ್ಲರ್ಸ್ ಅಸೋಸಿಯೇಶನ್, ಕಪನೂರ ಮತ್ತು ಬೇಲೂರ ಕೈಗಾರಿಕಾ ವಸಾಹತು ಪ್ರದೇಶದ ಎಚ್‌ಟಿ ಗ್ರಾಹಕರು, ಗುಲ್ಬರ್ಗ ವಿದ್ಯುತ್ ಸರಬರಾಜ ಕಂಪನಿ ಅಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಿದ್ದಾರೆ. ಕೈಗಾರಿಕೆಗಳಿಗೆ ಸಮರ್ಪಕ ವಿದ್ಯುತ್ ಪೂರೈಸುವುದು, ಬೇಡಿಕೆ ಆಧಾರಿತ ದರನಿಗದಿ ಸೇರಿದಂತೆ ,ನಾನಾ ವಿಷಯಗಳು ಚರ್ಚೆಗೆ ಬರಲಿವೆ. ಕೈಗಾರಿಕೋದ್ಯಮಿಗಳು ಈ ಸಭೆಯಲ್ಲಿ ಪಾಲ್ಗೊಳ್ಳುವಂತೆ ಎಚ್ಕೆಸಿಸಿಐ ಕೈಗಾರಿಕೆ ಉಪ ಸಮಿ ಅಧ್ಯಕ್ಷ ಚನ್ನಬಸಯ್ಯ ನಂದಿಕೋಲ್ ಕೋರಿದ್ದಾರೆ.

# ಇಂದು ಎಚ್‌ಟಿ ಗ್ರಾಹಕರ ಸಂವಾದ ಸಭೆ

09-01-2020 P.4

ಕಲಬುರಗಿ: ಜೆಸ್ಕಾಂ ಗ್ರಾಮೀಣ ವಿಭಾಗ-1 ಹಾಗೂ ನಗರ ವಿಭಾಗದ ಎಚ್.ಟಿ. ಗ್ರಾಹಕರ ಸಂವಾದ ಸಭೆಯನ್ನು ಜ. 9ರಂದು ಸಂಜೆ 4ಕ್ಕೆ ನಗರದ ಹುಮನಾಬಾದ ರಸ್ತೆಯಲ್ಲಿರುವ ಕೆಐಎಡಿಬಿ ಎರಡನೇ ಹಂತದ ಕಪಿಲೇಶ್ವರ ದಾಲ್ ಇಂಡಸ್ಟ್ರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸಂವಾದ ಸಭೆಯಲ್ಲಿ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ. ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಪರಿಹರಿಸಿ ಕೊಳ್ಳಬಹುದು ಎಂದು ಜೆಸ್ಕಾಂ ಗ್ರಾಮೀಣ ವಿಭಾಗ-1ರ ಕಾರ್ಯ ನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

## ಎಚ್‌ಟಿ ಗ್ರಾಹಕರ ಸಭೆ ನಾಳೆ

**ಕಲಬುರಗಿ:** ಕಲಬುರಗಿ ಜೆಸ್ಕಾಂ ಗ್ರಾಮೀಣ ವಿಭಾಗ-1 ಹಾಗೂ ನಗರ ವಿಭಾಗದ ಎಚ್.ಟಿ.ಗ್ರಾಹಕರ ಸಂವಾದ ಸಭೆ ಜ.9ರಂದು ಸಂಜೆ 4ಕ್ಕೆ ಕಲಬುರಗಿ ನಗರದ ಹುಮನಾಬಾದ್ ರಸ್ತೆಯಲ್ಲಿರುವ ಕೆ.ಐ.ಎ.ಡಿ.ಬಿ. 2ನೇ ಹಂತದ ಕಪಿಲೇಶ್ವರ ದಾಲ್ ಇಂಡಸ್ಟ್ರಿ ಸಭಾಂಗಣದಲ್ಲಿ ನಡೆಯಲಿದೆ. ಈ ಸಂವಾದ ಸಭೆಯಲ್ಲಿ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ ಎಂದು ಕಲಬುರಗಿ ಜೆಸ್ಕಾಂ ಗ್ರಾಮೀಣ ವಿಭಾಗ-1ರ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

## ಮುಷ್ಕರಕ್ಕೆ ಪ್ರಗತಿಪರರ ಬೆಂಬಲ

## ಎಚ್.ಟಿ.ಗ್ರಾಹಕರ ಸಂವಾದ ಸಭೆ ನಾಳೆ

ಕಲಬುರ್ಗಿ: ಜೆಸ್ಕಾಂ ಗ್ರಾಮೀಣ ವಿಭಾಗ-1 ಹಾಗೂ ನಗರ ವಿಭಾಗದ ಎಚ್.ಟಿ. ಗ್ರಾಹಕರ ಸಂವಾದ ಸಭೆಯನ್ನು ಇದೇ 9ರಂದು ಸಂಜೆ 4ಕ್ಕೆ ನಗರದ ಹುಮನಾಬಾದ್ ರಸ್ತೆಯಲ್ಲಿರುವ ಕೆ.ಐ.ಎ.ಡಿ.ಬಿ. ಎರಡನೇ ಹಂತದ ಕಪಿಲೇಶ್ವರ ದಾಲ್ ಇಂಡಸ್ಟ್ರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಸಂವಾದ ಸಭೆಯಲ್ಲಿ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕುಂದುಕೊರತೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.